**02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,ನ್ಯಾಃ ಚನ್ನಗಿರಿ,**
**<u>ಸಿಸಿ ನಂಃ 2452/2025</u>**

| **ಪಿರ್ಯಾದುದಾರರು** | **ವಿರುದ್ಧ** | **ಆರೋಪಿ:** |
|---|---|---|
| ಶ್ರೀಮತಿ ಯಶೋಧ ಎಂ. ಕೋಂ ಮಹಾಬಲೇಶ್ವರಪ್ಪ<br>ವಾಸಃ ದಂಡಿಗೇನಹಳ್ಳಿ ಗ್ರಾಮ, ಕಲಘಟ್ಟ ಪೋಸ್ಟ್,<br>ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ. | | ಪರಶುರಾಮ ಬಿನ್ ಭೀಮಪ್ಪ<br>ವಾಸಃ ಹಳ್ಳದ ಹತ್ತಿರ,<br>ಬಸಾಪುರ ಗ್ರಾಮ,<br>ದಾವಣಗೆರೆ ಟೌನ್ |

ನಾನು ಕುಮಾರಿಃ ಶಮಶ್ರೀವತ್ಸ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನಗಿರಿ, ಈ ಮೇಲ್ಕಂಡ ಆರೋಪಿಗಳಾದ ನೀವು ಈ ಕೆಳಕಂಡ ಆಪಾದನೆಗೆ ಗುರಿಪಡಿಸುತ್ತೇನೆ.

## <u>ಆಪಾದನೆ</u>

ಆರೋಪಿಯಾದ ನೀನು ಪಿರ್ಯಾದುದಾರರಿಗೆ ಪರಿಚಯದವರಿದ್ದು, 2024 ರ ಇಸವಿಯ ಜುಲೈ ತಿಂಗಳ ಕೊನೆಯ ವಾರದಂದು ಗೃಹ ಬಳಕೆಗೆ ಹಣದ ಅವಶ್ಯಕತೆ ಇದ್ದುದ್ದರಿಂದ, ಸಾಲವಾಗಿ ರೂಃ 4,00,000/- (ರೂಃ ನಾಲ್ಕು ಲಕ್ಷ) ಹಣವನ್ನು ಪಡೆದುಕೊಂಡು ಅದರ ತೀರುವಳಿಗಾಗಿ ಬಂಧನ್ ಬ್ಯಾಂಕ್, ದಾವಣಗೆರೆ ಶಾಖೆಯ ನಿಮ್ಮ ಖಾತೆಗೆ ಸಂಬಂಧಿಸಿದ, 01-02-2025 ರ, ಚೆಕ್ ಸಂಖ್ಯೆ-000006 ನ್ನು ನೀಡಿದ್ದು, ಅದನ್ನು ಪಿರ್ಯಾದುದಾರು ತನ್ನ ಖಾತೆಯಾದ ಎಸ್ ಬಿ ಐ ಬ್ಯಾಂಕ್, ಸಂತೆಬೆನ್ನೂರು ಶಾಖೆಯಲ್ಲಿ ನಗದೀಕರಣಕ್ಕಾಗಿ ಹಾಜರುಪಡಿಸಿದ್ದಾಗ, ನಿಮ್ಮ ಖಾತೆ Account Dormant ಆದ ಕಾರಣದಿಂದ ಅಮಾನ್ಯಗೊಂಡಿರುತ್ತದೆ ಹಾಗೂ ಸದರಿ ಚೆಕ್ ದಿಃ 13-03-2025 ರಂದು ಹಿಂಬರಹವನ್ನು ನೀಡಿ ಹಿಂದಿರುಗಿಸಲ್ಪಟ್ಟಿರುತ್ತದೆ. ಆದ್ದರಿಂದ ಪಿರ್ಯಾದುದಾರರು ತಮ್ಮ ವಕೀಲರ ಮುಖಾಂತರ ದಿಃ 07-04-2025 ರಂದು ಲೀಗಲ್ ನೋಟಿಸು ನೀಡಿದ್ದು, ಸದರಿ ನೋಟಿಸನ್ನು ನೀವು ದಿಃ 09-04-2025 ರಂದು ಸ್ವೀಕರಿಸಿದ್ದು ಸದರಿ ಸಾಲದ ಹಣವನ್ನು ಹಿಂದಿರುಗಿಸಿರುವುದಿಲ್ಲ ಹಾಗೂ ಲೀಗಲ್ ನೋಟಿಸಿಗೆ ಉತ್ತರವನ್ನು ಸಹ ನೀಡಿರುವುದಿಲ್ಲ. ಆದ್ದರಿಂದ, ಕಲಂ. 138 ನೆಗೋಷಿಯಬಲ್ ಕಾಯ್ದೆ ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ ಎಂದು ಆಪಾದಿಸಿದೆ.

Sd/-

ಸ್ಥಳಃ ಚನ್ನಗಿರಿ
ದಿನಾಂಕಃ 09-12-2025.

C/C 02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ ನ್ಯಾಯಾಲಯ, ಚನ್ನಗಿರಿ.

## 02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,ನ್ಯಾಃ ಚನ್ನಗಿರಿ,
## ಸಿಸಿ ನಂಃ 2452/2025

| **ಪಿರ್ಯಾದುದಾರರು** | **ವಿರುದ್ಧ** | **ಆರೋಪಿ:** |
|---|---|---|
| ಶ್ರೀಮತಿ ಯಶೋಧ ಎಂ. ಕೋಂ ಮಹಾಬಲೇಶ್ವರಪ್ಪ<br>ವಾಸಃ ದಂಡಿಗೇನಹಳ್ಳಿ ಗ್ರಾಮ, ಕಲಘಟ್ಟ ಪೋಸ್ಟ್,<br>ಹೊಳಲ್ಕೆರೆ  ತಾಲ್ಲೂಕು, ಚಿತ್ರದುರ್ಗ ಜಿಲ್ಲೆ. | | ಪರಶುರಾಮ ಬಿನ್ ಭೀಮಪ್ಪ<br>ವಾಸಃ ಹಳ್ಳದ ಹತ್ತಿರ,<br>ಬಸಾಪುರ ಗ್ರಾಮ,<br>ದಾವಣಗೆರೆ ಟೌನ್ |

## ಆರೋಪಿತ ಹೇಳಿಕೆ

ಪ್ರಶ್ನೆಃ 1.    ಈಗ ಓದಿ ಹೇಳಿದ ನಿನ್ನ ಮೇಲಿನ ಆಪಾದನೆ ತಿಳಿಯಿತೇ?

ಉತ್ತರಃ

ಪ್ರಶ್ನೆ. 2. ನೀವು ತಪ್ಪೋಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ಪರ ಸಾಕ್ಷಿ ಏನಾದರೂ ಇದೆಯೇ? ವಿಚಾರಣೆ ಆಗಬೇಕೆ?

ಉತ್ತರಃ

(ಆರೋಪಿತನಿಗೆ ಆರೋಪಣೆಯ ಸಾರಾಂಶವನ್ನು ದಿನಾಂಕಃ09-12-2025 ರಂದು ತೆರೆದ ನ್ಯಾಯಾಲಯದಲ್ಲಿ ಓದಿ ಕೇಳಿ ಅವನು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.)

ಸ್ಥಳಃ ಚನ್ನಗಿರಿ<br>ದಿನಾಂಕಃ  09-12-2025.

C/C 02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು<br>ಹಾಗೂ ಜೆ  ಎಂ ಎಫ್ ಸಿ  ನ್ಯಾಯಾಲಯ, ಚನ್ನಗಿರಿ.